‘ಕಣ್ ಕಣ್’ ಕಬ್ಬಿಣ ಬಡಿಯುವ ಸದ್ದಿಗೆ ಸುನೀತಾ ಎಚ್ಚರಗೊಂಡಳು. ಓಹ್! ಒಂಬತ್ತು ಗಂಟೆ! ಕೆಲಸಗಾರರು ಬಂದು ಅದಾಗಲೇ ಕೆಲಸ ಶುರುವಿಟ್ಟುಕೊಂಡಂತಿದೆ... ಪಕ್ಕದ ಮನೆಯ ರಿಪೇರಿ ಕೆಲಸ ನಡೆಯುತ್ತಿದ್ದು – ಮಹಡಿ ಕಟ್ಟುತ್ತಿದ್ದು... ಸುಣ್ಣ ಬಣ್ಣ – ಇನ್ನು ಆರು ತಿಂಗಳು ಈ ಸದ್ದಿನಲ್ಲಿ ಮುಳುಗೇಳಬೇಕು. ಮುಖ ದಪ್ಪ ಮಾಡಿಕೊಂಡೇ ಸುನೀತಾ ಗಡಬಡಿಸಿ ಎದ್ದು ಹಲ್ಲುಜ್ಜತೊಡಗಿದಳು. ಹಲ್ಲುಜ್ಜಿ ಗೇಟ್ ಬೀಗ ತೆಗೆದು ಒಳಗೆ ಬಂದು ಕಾಫಿಗೆ ಹಾಲಿಟ್ಟಳು. ಇನ್ನು ಮೇಲೆ ರಾತ್ರಿ ಟಿ.ವಿ.ಯಲ್ಲಿ ಸಿನಿಮಾ ನೋಡಬಾರದು. ಬೆಳಿಗ್ಗೆ ಎಚ್ಚರವೇ ಆಗಲ್ಲ. ತನಗೆ ತಾನೇ ಹೇಳಿಕೊಂಡಳು.

ಸುನೀತಾ ಗೃಹಿಣಿ. ಇರುವುದು ಹುಬ್ಬಳ್ಳಿಯಲ್ಲಿ. ಗಂಡ ಶಿವಣ್ಣ ಬ್ಯಾಂಕ್ ಮ್ಯಾನೇಜರ್. ಅವನಿಗೆ ಬೆಳಗಾವಿಯಲ್ಲಿ ಕೆಲಸ. ಹುಬ್ಬಳ್ಳಿಯಲ್ಲಿ ಸ್ವಂತ ಮನೆ. ಬೆಳಗಾವಿಯಲ್ಲಿಯೂ ರೂಂ ಮಾಡಿರುವವನು.

ಶುಕ್ರವಾರ ಸಂಜೆ ಹೊರಟು ರಾತ್ರಿ ಹುಬ್ಬಳ್ಳಿಗೆ ಬಂದು ಎರಡು ದಿನ ಇದ್ದು ಸೋಮವಾರ ಬೆಳಿಗ್ಗೆ ನಸುಕಿನಲ್ಲೇ ಮತ್ತೆ ಬೆಳಗಾವಿಗೆ ಹೋಗುವವನು. ಇನ್ನೂ ನಾಕು ವರುಷ ಸರ್ವೀಸ್ ಇದೆ. ಸುನೀತಾ–ಶಿವಣ್ಣಾರಿಗೆ ಒಬ್ಬಳೇ ಮಗಳು, ಅಮೆರಿಕಾದಲ್ಲಿ ಕೆಲಸದಲ್ಲಿ ಇರುವವಳು. ಜತೆಯಲ್ಲಿ ಪಿಎಚ್.ಡಿ. ಕೂಡ ಮಾಡುತ್ತಿರುವವಳು.

‘ಅಮ್ಮ’ ಎಂದು ಕೆಲಸದ ರೇಣು ಕೂಗಿದಳು.

ಮೊದಲು ಬಾಗಿಲಿಗೆ ನೀರು ಹಾಕಿ ರಂಗೋಲೆ ಇಡು, ಆಮೇಲೆ ಬಟ್ಟೆ ಪಾತ್ರೆ ಮಾಡು... ತಗೋ ಕಾಫಿ’ ಎಂದು ಅವಳಿಗೂ ಕೊಟ್ಟು, ಎರಡು ಬ್ರೆಡ್ ತುಂಡು ಇಟ್ಟುಕೊಂಡು ಸುನೀತಾ ಕಾಫಿ ಕುಡಿಯತೊಡಗಿದಳು.

ಮೊಬೈಲ್ ರಿಂಗಾಯಿತು. ಗಂಡ ಶಿವಣ್ಣನ ಕರೆ. ‘ತುಂಬಾ ಕೆಲಸ, ಇವತ್ತು ಬರಲ್ಲ... ಏನು ತಿಂಡಿ?' ಎಂದು ಕೇಳಿದನು. ಹಾಗೆಯೇ ‘ಇವತ್ತು ಪಡ್ಡಿಗೆ ನೆನೆಸು, ನಾಳೆ ಬೆಳಿಗ್ಗೆ ತಿಂಡಿಗೇ ಬಂದುಬಿಡ್ತೀನಿ. ಮಧ್ಯಾಹ್ನ ಮುದ್ದೆ ಹೆಸರುಕಾಳು ಸಾರು ಮಾಡು’ ಎಂದು ಕರೆ ಮೊಟಕುಗೊಳಿಸಿದನು.

ಸ್ವಲ್ಪ ರೊಟ್ಟಿ ಹಿಟ್ಟು ಇತ್ತು. ಅಲಸಂದೆ ಪಲ್ಯವೂ ಫ್ರಿಜ್‌ನಲ್ಲಿ ಇತ್ತು. ಅದನ್ನೇ ತಿಂಡಿಗೆ ತಿಂದು ಮಧ್ಯಾಹ್ನಕ್ಕೆ ಆಮ್ಲೇಟ್ ಮಾಡಿಕೊಂಡು ತಿಂದರಾಯಿತು ಎಂದು ಸುನೀತಾ ಅಂದುಕೊಂಡಳು. ಮೊನ್ನೆ ಮಾಡಿದ ತಿಳಿಸಾರು ಕೂಡ ಇದೆ. ಅದನ್ನು ಮಧ್ಯಾಹ್ನ ಖಾಲಿ ಮಾಡಿದರಾಯಿತು ಎಂದುಕೊಂಡಳು. ನಾಳೆ ನಾಡಿದ್ದು ಬಿಸಿ ಬಿಸಿಯಾಗಿ ಅಡಿಗೆ ಮಾಡುವುದು ಇದ್ದೇ ಇದೆ ಎಂದು ಟಿ.ವಿ. ಆನ್ ಮಾಡಿ ಪೇಪರು ಕೈಗೆತ್ತಿಕೊಂಡಳು.

‘ಕಣ್ ಕಣ್’ ಕಬ್ಬಿಣದ ಕೆಲಸದ ಸದ್ದು. ಜಲ್ಲಿಕಲ್ಲು ಸುರಿದ ಸದ್ದು. ಸಿಮೆಂಟಿನ ಧೂಳು! ಸುನೀತಾ ಕಿಟಕಿ ಮುಚ್ಚಿ ಮೊಬೈಲ್‌ನಲ್ಲಿ ವಾಟ್ಸಾಪ್ ಫೇಸ್‌ಬುಕ್ ಚೆಕ್ ಮಾಡತೊಡಗಿದ್ದಳು. ಅಬ್ಬಾ ಸಾವಿರ ಮೆಸೇಜುಗಳು ನೋಟಿಫಿಕೇಶನ್ನುಗಳು... ಕೆಲಸದ ರೇಣು ಕಸ ಗುಡಿಸಲು ಪಡಸಾಲೆಗೆ ಬರಲು ಹಿತ್ತಲಿಗೆ ಹೋಗಿ ಕೂತು ಮೆಸೇಜುಗಳಿಗೆ ಉತ್ತರ ಕೊಡತೊಡಗಿದಳು.

ನಡುನಡುವೆ ಮೊಬೈಲ್‌ಗೆ ಬಂದ ಕರೆಗೆ ಉತ್ತರಿಸತೊಡಗಿದಳು. ಅಕ್ಕ ಮಂಜು, ತಂಗಿ ಸುವರ್ಣಳಿಗೆ ಕರೆ ಮಾಡಿ ಯೋಗಕ್ಷೇಮ ವಿಚಾರಿಸಿದಳು. ಗೆಳತಿ ಶ್ರೀಮತಿ ಮತ್ತು ಶಾಂತಾಗೆ ಬುಧವಾರದ ಕಿಟ್ಟಿ ಪಾರ್ಟಿಯ ಟೂರಿನ ಬಗ್ಗೆ ಕರೆ ಮಾಡಿ ಮಾಹಿತಿ ನೀಡಿದಳು.

ಕೆಲಸದ ರೇಣುವನ್ನು ಕಳಿಸಿ, ತಲೆಗೆ ಡೈ ಹಾಕಿಕೊಂಡು ಸ್ನಾನ ಮಾಡಿ ದೇವರಿಗೆ ಊದುಗಡ್ಡಿ ಬೆಳಗಿ ರೊಟ್ಟಿ ಪಲ್ಯ ತಿಂದು ಚಾ ಕುಡಿದು ಬಟಾಣಿ ಕುರ್ಮಾ ಮಾಡುವುದು ಹೇಗೆ ಎಂದು ಕೇಳಲು ಸುಂದರಮ್ಮನಿಗೆ ಕರೆ ಮಾಡಿದರೆ ಅವಳು ಅವಳ ಪಕ್ಕದ ಮನೆಯವರ ಕತೆಯನ್ನು ಅರ್ಧ



ಗಂಟೆ ಹೇಳಿ... ಕೊನೆಗೂ ಸುನೀತಾಗೆ ಕುರ್ಮಾ ರೆಸಿಪಿ ಹೇಳದೆ ಫೋನ್ ಬಂದ್ ಮಾಡಿದಳು. ತಕ್ಷಣ ಫೋನ್ ಮಾಡಿದರೆ ಅವರ ಫೋನು ಸಂಭಾಷಣೆಯಲ್ಲಿ ನಿರತವಾಗಿತ್ತು!

ಸುನೀತಾ ಹಾಲಿನ ಬೂತಿಗೆ ಹೋಗಿ ಹಾಲು ತರುವಾಗ ಸಿಕ್ಕ ತನುಜಾ ವೈರಲ್ ಫೀವರ್‌ಗೆ ಯಾವ ಆಸ್ಪತ್ರೆ ಸೂಕ್ತ ಎಂದು ಮಾತಿಗೆ ತೊಡಗಿದವಳು, ಶುಭಂನಲ್ಲಿ ಡಿಸ್ಕೌಂಟ್ ಸೇಲ್ ಇರುವುದನ್ನು ಹೇಳಲು ಬರೋಬ್ಬರಿ ಅರ್ಧಗಂಟೆ ತೆಗೆದುಕೊಂಡಳು.

ಮನೆಗೆ ಬಂದು ಸುನೀತಾ ಬಟ್ಟೆ ಮಡಿಸಿ ಪಾತ್ರೆ ತೆಗೆದಿಟ್ಟು – ಉದ್ದಿನ ಬೇಳೆ, ಅಕ್ಕಿ, ಹೆಸರುಕಾಳು ಬೇರೆ ಬೇರೆ ನೆನೆಸಿ ದೇವರ ತಟ್ಟೆ ಲೋಟ ದೀಪ ಇತ್ಯಾದಿಗಳನ್ನು ಬಿಸಿನೀರಿನಲ್ಲಿ ಹಾಕಿಟ್ಟು, ಕುಕ್ಕರಿನಲ್ಲಿ ಅನ್ನಕ್ಕಿಟ್ಟು, ರಾತ್ರಿ ಫೋನ್ ಮಾಡುವ ಮಗಳಿಗೆ ರಾಮಕ್ಕ ಅಪಘಾತಕ್ಕೆ ಈಡಾದ ಸುದ್ದಿ ತಪ್ಪದೆ ಹೇಳಬೇಕು ಅಂದುಕೊಂಡಳು.

ಟಿ.ವಿ.ಯಲ್ಲಿ ಆರೋಗ್ಯ ಕಾರ್ಯಕ್ರಮ ನೋಡುತ್ತಾ ಸುನೀತಾ ಊಟ ಮಾಡಿದಳು... ಒಂದರ್ಧ ಸಿನಿಮಾ ನೋಡಿ ಬೋರಾಗಿ ಯೂಟ್ಯೂಬ್‌ನಲ್ಲಿ ಹಳೆಯ ಹಿಂದಿ ಚಿತ್ರಗೀತೆ ಹಾಕಿಕೊಂಡು ಅಲ್ಲೇ ಒರಗಿದಳು.

‘ಕಣ್ ಕಣ್’ ಸಾಕಣ್ಣೋ... ಜೋರಾಗಿ ಕೂಗಿದ ಸದ್ದು!

‘ಇನ್ನೂ ಕಾಲು ಗಂಟೆ ಇದೆ’ ಮೇಸ್ತ್ರಿ ಗುಟುರು ಹಾಕುತ್ತಿದ್ದ. ‘ಅಯ್ಯೋ ಸಿಟಿ ಬಸ್ಸು ವೊಂಟೋಯ್ತದೆ... ಮನೆಗೆ ಹೋಗಿ ಸಾನ ಮಾಡಿ ಗಂಡ ಮಕ್ಕಳಿಗೆ ಬೇಯಿಸಿ ಹಾಕಬೇಕು... ಎಂಗಸರ ಕಷ್ಟ ನಿಮಗೆ ಗೊತ್ತಾಗುಲ್ಲ...’ ಹೆಂಗಸು ಗದರುತ್ತಿದ್ದಳು. ನೀರು ಸುರಿದುಕೊಂಡು ಕೈಕಾಲು ಮುಖ ತೊಳೆದುಕೊಳ್ಳುವ ಶಬ್ದ ಕೇಳುತ್ತಿತ್ತು. ‘ಟೇಮ್ ಪಾಲೋ ಮಾಡದಿದ್ರೆ ಇಪ್ಪತ್ತು ರೂಪಾಯಿ ಮುರಕೋತೀನೀ’ ಮೇಸ್ತ್ರಿ ಒದರುತ್ತಿದ್ದ.

ಸುನೀತ ಗಡಬಡಿಸಿ ಎದ್ದು ಮುಖ ತೊಳೆದುಕೊಂಡು ಕಿಟಕಿಯಲ್ಲಿ ಮುಖ ಹಾಕಿ ತಲೆಬಾಚಿಕೊಳ್ಳತೊಡಗಿದಳು. ಸುಶೀಲ ಬರುತ್ತಿರುವುದು ಕಾಣಿಸಿತು. ಅರ್ಧ ಗಂಟೆ ಹಾಗೇ ಸುಶೀಲನ ಜತೆ ವಾಕ್ ಹೋಗಿ ಚಾಟ್ ತಿನ್ನಬೇಕು... ಸದ್ಯ ಕಾಫಿ ಕುಡಿಯುತ್ತಾ ಸುಶೀಲನ ಜತೆ ಏನೆಲ್ಲಾ ಹಂಚಿಕೊಳ್ಳಬೇಕು ಎಂದು ಒಂದೊಂದೇ ನೆನಪು ಮಾಡಿಕೊಳ್ಳತೊಡಗಿದಳು...